# ವಾರ್ತಾ ವಿಶ್ಲೇಷಣೆ

## ಶಿಶುಪಾಲನೆ

**ಇತ್ತೀಚೆಗೆ** ಅಮೆರಿಕದಲ್ಲಿ ನಡೆದ ಘಟನೆ ನಮ್ಮೆಲ್ಲರ ಕಣ್ಣು ತೆರೆಯಿಸುವಂತಹುದು. ಆರು ವರ್ಷದ ಶಾಲೆಯ ಹುಡುಗನೊಬ್ಬನು ತನ್ನ ತರಗತಿಯಲ್ಲೇ ಓದುತ್ತಿದ್ದ ಕಲ್ಯಾ ರೋಲ್ಯಾಂಡ್ ಎಂಬ ಆರು ವರ್ಷದ ಹುಡುಗಿಯನ್ನು ಗುಂಡಿಟ್ಟು ಕೊಂದನು. ಇಂತಹ ಭೀಕರ ಬಾಲಾಪರಾಧಕ್ಕೆ ಕಾರಣವೇನು? ಇದಕ್ಕೆ ಆ ಬಾಲಕನ ಕೌಟುಂಬಿಕ ಹಿನ್ನೆಲೆಯೇ ಬಹುಮಟ್ಟಿಗೆ ಕಾರಣ. ಅವನ ತಂದೆತಾಯಿಗಳಿಬ್ಬರೂ ಅಪರಾಧಿಗಳು. ತಾಯಿ ಡ್ರಗ್ ಅಡಿಕ್ಟ್. ಖಂಡಿತವಾಗಿಯೂ ಅವರು ಆ ಹುಡುಗನನ್ನು ಸರಿಯಾಗಿ ಸಾಕಿರಲಿಕ್ಕಿಲ್ಲ. ಆ ಹುಡುಗ ತಂದೆ ತಾಯಿಯರ ವಾತ್ಸಲ್ಯವನ್ನು ಸವಿದಿರಲಿಕ್ಕಿಲ್ಲ. ಶಿಶುವಾಗಿ ಅವನು ತಾಯಿಯಿಂದ ಕಲಿಯಬೇಕಾದ ಪ್ರಥಮ ಪಾಠವನ್ನು ಕಲಿತಿರಲಿಕ್ಕಿಲ್ಲ. ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ:

> ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಠಿತಃ |
> ನ ಶೋಭತೇ ಸಭಾ ಮಧ್ಯೇ ಹಂಸಮಧ್ಯೇ ಬಕೋ ಯಥಾ ||

'ಯಾರಿಂದ ಬಾಲಕನು ವಿದ್ಯಾವಂತನಾಗಿಲ್ಲವೋ ಅಂತಹ ತಂದೆತಾಯಿಗಳು ಅವನ ಪಾಲಿಗೆ ಶತ್ರುಗಳಿದ್ದಂತೆ. ಅವನು ಸಭಾ ಮಧ್ಯದಲ್ಲಿ ಹಂಸಗಳ ನಡುವೆ ಬಕಪಕ್ಷಿಯಂತಿರುತ್ತಾನೆ.' ಅಂಥವನು ಸಮಾಜದಲ್ಲಿ ಬಕಾಸುರನೇ ಆಗಿರುತ್ತಾನೆ.

ಇದು ಕುಟುಂಬ ಜೀವನದ ಮಹತ್ವವನ್ನು ಸೂಚಿಸುತ್ತದೆ. ಕುಟುಂಬ ಎನ್ನುವುದು ಒಂದು ಸುಂದರ ಹೂದೋಟವಿದ್ದಂತೆ. ಅಲ್ಲಿರುವ ಮಕ್ಕಳು ಸಸಿಗಳಿದ್ದಂತೆ. ಅವರನ್ನು ತುಂಬ ಎಚ್ಚರಿಕೆಯಿಂದ, ಪ್ರೀತಿ ವಾತ್ಸಲ್ಯಗಳಿಂದ ಲಾಲಿಸಿ ಪಾಲಿಸಬೇಕು. ಬರಿ ಲಾಲಿಸುವುದು ಮಾತ್ರ ಸಾಲದು, ಪಾಲಿಸುವುದು ಅತ್ಯಂತ ಮುಖ್ಯ. ಆದರೆ ಒಂದು ವ್ಯತ್ಯಾಸವಿದೆ. ತೋಟಗಾರನು ಎಂಥ ಜೀವನ ನಡೆಸುತ್ತಾನೆ ಎಂಬುದು ಮುಖ್ಯವಲ್ಲ. ಅವನು ಹೇಗೇ ಇರಲಿ ಗಿಡಗಳನ್ನು ಸರಿಯಾಗಿ ನೋಡಿಕೊಂಡರೆ ಸಾಕು. ಆದರೆ ಮಕ್ಕಳನ್ನು ಸಾಕಬೇಕಾದರೆ ಸಾಕುವವರ ಜೀವನ ಉತ್ತಮವಾಗಿರಬೇಕು. ಇಲ್ಲದಿದ್ದರೆ ಸಮಾಜಕಂಟಕರನ್ನು ನಿರ್ಮಾಣ ಮಾಡುತ್ತಾರೆ. ಸಮಾಜವನ್ನು ಸುಸ್ಥಿತಿಯಲ್ಲಿಡುವ ಹೊಣೆಗಾರಿಕೆ ನಮ್ಮ ಮೇಲಿದೆ ಎಂಬ ಸಾಮಾಜಿಕ ಪ್ರಜ್ಞೆ ಅವರಿಗಿರಬೇಕು.

ಮಕ್ಕಳು ದೊಡ್ಡವರಾಗಿ, ವಿದ್ಯಾವಂತರಾಗಿ, ಒಳ್ಳೆಯ ಕೆಲಸಕ್ಕೆ ಸೇರಿ ತಮ್ಮನ್ನು ಸರಿಯಾಗಿ ಸಾಕಬೇಕು ಎಂಬಷ್ಟೇ ಮನೋಭಾವ ಇದ್ದರೆ, ಹೆಚ್ಚಿನ ಸಂದರ್ಭಗಳಲ್ಲಿ ತಂದೆತಾಯಿಯರ ನಿರೀಕ್ಷೆ ಸಫಲವಾಗುವುದಿಲ್ಲ. ಆದರೆ ಮಕ್ಕಳಿಗೆ ಉತ್ತಮ ಜೀವನವನ್ನು ಕಲಿಸಿಕೊಟ್ಟರೆ ಅವರು ಎಂದೆಂದಿಗೂ ತಾಯಿತಂದೆಯರಿಗೆ ಕೃತಜ್ಞರಾಗಿರುತ್ತಾರೆ. ಆಗ ವಯಸ್ಸಾದಮೇಲೆ ತಾಯಿತಂದೆಯರು ವೃದ್ಧಾಶ್ರಮವನ್ನು ಸೇರುವ ಆವಶ್ಯಕತೆಯಿರುವುದಿಲ್ಲ. ❀

## ಪ್ರಗತಿಯ ಹೊಸ ನಿರೂಪಣೆ

**ಒಂದು** ದೇಶದ ಪ್ರಗತಿಯನ್ನು ಆರ್ಥಿಕ ದೃಷ್ಟಿಯಿಂದ ನೋಡುವುದು ನಮಗೆ ವಾಡಿಕೆಯಾಗಿದೆ. ಆರ್ಥಿಕ ಪ್ರಗತಿಯಿಂದ ಜೀವನ ಮಟ್ಟವೂ ಉತ್ತಮವಾಗುತ್ತದೆ ಎಂಬ ನಂಬಿಕೆ ಈಗ, ತಡವಾಗಿಯಾದರೂ ನುಚ್ಚು ನೂರಾಗುವಂತಾಗಿದೆ. ಅಮೆರಿಕ ದೇಶದಲ್ಲಿ ಗಮನಾರ್ಹ ಆರ್ಥಿಕ ಪ್ರಗತಿಯಾಗಿದೆ. ಆದರೆ ಅಲ್ಲಿಯ ವರದಿಗಳ ಪ್ರಕಾರ ಅಲ್ಲಿಯ ಜನರ ಜೀವನ ಗುಣಮಟ್ಟ ೧೯೭೦ರಿಂದೀಚೆಗೆ ತುಂಬ ಕುಸಿಯುತ್ತಿದೆ.

ಆದ್ದರಿಂದ ಅಲ್ಲಿ ಈಗ ಪ್ರಗತಿಯ ವಿಷಯದಲ್ಲಿ ಮರು ಚಿಂತನೆ ನಡೆಯುತ್ತಿದೆ. ಪ್ರಗತಿಯನ್ನು GDP ಮೂಲಕ ಅಳೆಯುವ ಬದಲು *Genuine Progress Indicator* (GPI)—ಯಥಾರ್ಥ ಪ್ರಗತಿ ಸೂಚಕದ ಮೂಲಕ ಅಳೆಯಬೇಕು ಎಂದು ಅನೇಕರು ಭಾವಿಸುತ್ತಿದ್ದಾರೆ. ಯಥಾರ್ಥ ಪ್ರಗತಿ ಸೂಚಕಗಳಾವುವು? ಉತ್ತಮ ಆರೋಗ್ಯ, ವ್ಯವಸ್ಥಿತ ಕುಟುಂಬ ಜೀವನ, ನೆಮ್ಮದಿಯ ಸುರಕ್ಷಿತ ಸಾಮಾಜಿಕ ಪರಿಸರ, ಮಾಲಿನ್ಯರಹಿತ ವಾತಾವರಣ ಇತ್ಯಾದಿಗಳು.

ಭಾರತದಲ್ಲಿ ೨೦೦೦-೨೦೦೧ ವರ್ಷದ ಅವಧಿಯಲ್ಲಿ ಜಗತ್ತಿನಲ್ಲಿಯೇ ಅತ್ಯಧಿಕ GDPಯ ವೃದ್ಧಿಯಾಗುತ್ತದಂತೆ. ಆದರೆ ಇದರಲ್ಲಿ ನಾವು ಹೆಮ್ಮೆ ಪಡುವಂತಹುದು ಏನೂ ಇಲ್ಲ. ರಾಷ್ಟ್ರೀಯ ಮಟ್ಟದಲ್ಲಿ ಆರ್ಥಿಕ ಅಭಿವೃದ್ಧಿ ಎಷ್ಟೇ ಆದರೂ ದೇಶದ ಬಡತನದ ರೇಖೆ ಕೆಳಗಿಳಿಯುವುದಿಲ್ಲ. ಬಡವರಿಂದ ತುಂಬಿದ ಶ್ರೀಮಂತ ರಾಷ್ಟ್ರವಾಗುತ್ತದೆ ಅಷ್ಟೇ.

ನಿಜವಾದ ಪ್ರಗತಿಯೆಂದರೆ ಮಾನವನ ಪ್ರಗತಿ—ಅವನು ವಿಕಾಸ ಹೊಂದಿ ಮೃಗೀಯ ಸ್ವಭಾವದಿಂದ ಮುಕ್ತನಾಗಿ ನಿಜವಾದ ಮಾನವನಂತೆ ಬಾಳುವುದು. ಬೇರೆ ಎಲ್ಲ ಪ್ರಗತಿಯೂ ಇದಕ್ಕೆ ಪೂರಕವಾಗಿದ್ದರೆ ಒಳ್ಳೆಯದು, ಅದಿಲ್ಲದೆ ಮಾರಕವಾಗಿದ್ದರೆ ತುಂಬ ಶೋಚನೀಯ. ಈಗಿನ ಆರ್ಥಿಕ ಬೆಳವಣಿಗೆ ಮಾರಕವಾಗಿರುವಂತೆಯೆ ಕಂಡುಬರುತ್ತಿದೆ, ಏಕೆಂದರೆ ಇದು ಮಾನವನ ದೌರ್ಬಲ್ಯದ ಪ್ರಯೋಜನವನ್ನು ಪಡೆದು ಬೆಳೆಯುತ್ತಿದೆ. ಮಾನವನ ಆಸೆಗಳು ಅಧಿಕವಾದಷ್ಟೂ, ಅವನ ಭೋಗೇಚ್ಛೆ ವೃದ್ಧಿಯಾದಷ್ಟೂ ಆರ್ಥಿಕ ಪ್ರಗತಿ ತ್ವರಿತವಾಗುತ್ತದೆ. ಅವನ ದುಶ್ಚಟಗಳೇ ಆರ್ಥಿಕ ಪ್ರಗತಿಗೆ ಆಧಾರ. ಯುದ್ಧತಾಂತ್ರಿಕತೆಯ ಬೆಳವಣಿಗೆ ಅವನ ಹಿಂಸಾ ಪ್ರವೃತ್ತಿಯನ್ನೇ ಅವಲಂಬಿಸಿದೆ. ಹೀಗೆ ಆರ್ಥಿಕ ಪ್ರಗತಿಯು ಮಾನವನು ಹೆಚ್ಚು ಹೆಚ್ಚು ಅವನತಿ ಹೊಂದುವುದನ್ನು ಅವಲಂಬಿಸಿದೆ. ಆದರೆ ಇಂತಹ ಅವನತಿಯೇ ಮುಂದೆ ಆರ್ಥಿಕ ಪ್ರಗತಿಗೆ ಮಾರಕವಾಗುತ್ತದೆ. ಆರ್ಥಿಕ ಪ್ರಗತಿ ಮಾನವ ಪ್ರಗತಿಗೆ ಮಾರಕ, ಮಾನವ ಅವನತಿ ಆರ್ಥಿಕ ಪ್ರಗತಿಗೆ ಮಾರಕ. ಇದೊಂದು ವಿಷವೃತ್ತ. ಇದೇ ಮಾಯೆ. ❀